

2003ರಲ್ಲಿ ಅನೂಷ್ಕಾ 'ಗ್ರ್ಯಾಮಿ' ಪ್ರಶಸ್ತಿಗೆ ನಾಮಕರಣಗೊಂಡಿದ್ದರು! ವಿಶ್ವ ಸಂಗೀತ ವಿಭಾಗದಲ್ಲಿ ಗ್ರ್ಯಾಮಿಗೆ ನಾಮಕರಣಗೊಂಡ ಅತ್ಯಂತ ಕಿರಿಯ ವಯಸ್ಸಿನ ಕಲಾವಿದೆ ಹಾಗೂ ಮೊದಲ ಮಹಿಳೆ ಎನ್ನುವ ಖ್ಯಾತಿ ಅನೂಷ್ಕಾಳದ್ದು. ಅದೂ ಮೂರನೇ ಆಲ್ಬಂ 'ಲೈವ್ ಅಟ್ ಕಾರ್ನಿಗೀ ಹಾಲ್' ಸಲುವಾಗಿ.

■ ಬಿಂದು

# ಅನೂಷ್ಕಾ ಹೊಸ ಆಲ್ಬಂ

ಎರಡು ವರ್ಷಗಳ ಬಳಿಕ ಅನೂಷ್ಕಾ ಶಂಕರ್ ಭಾರತಕ್ಕೆ ಸಿತಾರ್ ಕಾರ್ಯಕ್ರಮ ಕೊಡಲು ಬರುತ್ತಿದ್ದಾರೆ. ಫೆಬ್ರುವರಿಯಲ್ಲಿ ಮುಂಬೈ ಮತ್ತು ದೆಹಲಿಯಲ್ಲಿ ಎರಡು ಕಾರ್ಯಕ್ರಮಗಳು ನಡೆಯಲಿವೆಯಂತೆ. ಲಂಡನ್ನಿನಲ್ಲಿ ವಾಸಿಸುತ್ತಿರುವ ಈ ಭಾರತೀಯ ಸಿತಾರ್ ವಾದಕಿಯ ಹೊಸ ಆಲ್ಬಂ 'ಲವ್ ಲೆಟರ್ಸ್'ಅನ್ನು ಪ್ರಚುರಪಡಿಸಲು ಈ ಕಾರ್ಯಕ್ರಮಗಳನ್ನು ಯೋಜಿಸಲಾಗಿದೆ. ಇಲ್ಲಿಂದಲೇ ಆಕೆಯ ಹೊಸ ಆಲ್ಬಂನ ವಿಶ್ವಪರ್ಯಟನವೂ ಶುರುವಾಗಲಿದೆ.

ಅನೂಷ್ಕಾ ಕೇವಲ ಸಿತಾರ್ ಕಲಾವಿದೆ ಮಾತ್ರವಲ್ಲ, ಸಂಗೀತ ಸಂಯೋಜಕಿ ಮತ್ತು ಆಲ್ಬಂಗಳ ನಿರ್ಮಾಪಕಿಯೂ ಹೌದು. ವಿಶ್ವದ ಪ್ರತಿಷ್ಠಿತ ಸಂಗೀತ ಪ್ರಶಸ್ತಿ 'ಗ್ರ್ಯಾಮಿ'ಗೆ ಆರು ಸಲ ನಾಮಕರಣಗೊಂಡಿರುವ ಹೆಮ್ಮೆ ಈಕೆಯದ್ದು. ಎರಡು ಮಕ್ಕಳ ಜೊತೆಗೆ ಲಂಡನ್ನಿನಲ್ಲಿ ವಾಸ. ಗಂಡ, ಬ್ರಿಟನ್ನಿನ ಚಿತ್ರ ನಿರ್ದೇಶಕ ಜೋ ರೈಟ್ ಈಗ ಆಕೆಯ ಜೊತೆಗಿಲ್ಲ. ಕಳೆದ ವರ್ಷ ಗಂಡನಿಂದ ವಿಚ್ಛೇದನ ಪಡೆದ ಬಳಿಕ ಇದು ಆಕೆಯ ಮೊದಲ ಸಾರ್ವಜನಿಕ ಕಾರ್ಯಕ್ರಮವೂ ಹೌದು. ಅದೂ ಅಲ್ಲದೆ ಅನೂಷ್ಕಾರ ತಂದೆ ಖ್ಯಾತ ಸಿತಾರ್ ವಾದಕ ಪಂಡಿತ್ ರವಿಶಂಕರ್ ಅವರ ಜನ್ಮಶತಾಬ್ದಿಯೂ ಹೌದು.

'ಆಘಾತ ಮತ್ತು ಸವಾಲುಗಳು ಒಟ್ಟೊಟ್ಟಿಗೆ ಬಂದದ್ದರಿಂದ ಸ್ವಲ್ಪ ಕಾಲ ದುರ್ಬಲಳಾಗಿದ್ದೆ. ಆದರೀಗ ನನ್ನ ಹೊಸ ಆಲ್ಬಂನ ಹಾಡುಗಳು ಮತ್ತು ಅಪ್ಪನ ಜನ್ಮಶತಾಬ್ದಿಯ ನೆನಪನ್ನು ಹಿಡಿದುಕೊಂಡು ವಿಶ್ವಪರ್ಯಟನೆಗೆ ಹೊರಟಿದ್ದೇನೆ' ಎನ್ನುವುದು ಆಕೆಯದ್ದೇ ಹೇಳಿಕೆ. 2016ರ ಬಳಿಕ ಅನೂಷ್ಕಾರ ಯಾವ ಆಲ್ಬಂಗಳೂ ಬಂದಿಲ್ಲ. 'ಟ್ರೇಸಸ್ ಆಫ್ ಯು', 'ಹೋಮ್', 'ಲ್ಯಾಂಡ್ ಆಫ್ ಗೋಲ್ಡ್' ಆಲ್ಬಂಗಳ ಜನಪ್ರಿಯತೆ ಇನ್ನೂ ಕುಂದಿಲ್ಲ. ಈಗ 'ಲವ್ ಲೆಟರ್ಸ್' ಸಿದ್ಧವಾಗಿದೆ.

ಅನೂಷ್ಕಾಗೆ ತಂದೆಯೇ ಗುರು. ಎಳೆಯ ಎಳವೆಯಲ್ಲೇ ತಂದೆಯ ಜೊತೆಗೆ ಕಲಿಕೆ ಶುರು. 10ರ ವಯಸ್ಸಿನಿಂದ ತಂದೆಯ ಕಛೇರಿಯಲ್ಲಿ ತಾನ್ಪುರ್ ಹಿಡಿದುಕೊಂಡು ಕುಳಿತುಕೊಳ್ಳತೊಡಗಿದಳು. 13ರ ಹರೆಯದಲ್ಲಿಯೇ ಮೊದಲ ಸಾರ್ವಜನಿಕ ಕಾರ್ಯಕ್ರಮ. 1995ರಲ್ಲಿ ದೆಹಲಿಯ ಸಿರಿಫೋರ್ಟ್‌ನಲ್ಲಿ ಆಕೆ ನೀಡಿದ ಕಾರ್ಯಕ್ರಮಕ್ಕೆ ತಂದೆಯ 75ನೇ ಜನ್ಮದಿನದ ಆಚರಣೆಯ ಹಿನ್ನೆಲೆಯೂ ಇತ್ತು. ಆ ಕಾರ್ಯಕ್ರಮದಲ್ಲಿ ತಬಲಾ ಸಾಥ್ ನೀಡಿದ್ದು ಝಾಕಿರ್ ಹುಸೇನ್. ಅದೇ ವರ್ಷ ನಾಲ್ಕು ಸಿ.ಡಿ.ಗಳ ಬಾಕ್ಸ್ 'ಇನ್ ಸೆಲೆಬ್ರೇಷನ್' ಬಿಡುಗಡೆ ಆಯಿತು.

ತಂದೆ ಪಂಡಿತ್ ರವಿಶಂಕರ್ ಕಾರ್ಯಕ್ರಮದಲ್ಲಿ ಸಿತಾರ್ ಸಾಥ್ ನೀಡಲು ಆರಂಭಿಸಿದಾಗ ಆಕೆಗೆ ಇನ್ನೂ 14 ವರ್ಷ. 15ರ ಹರೆಯದಲ್ಲಿ ತಂದೆಯ 'ಚಾಂಟ್ಸ್ ಆಫ್ ಇಂಡಿಯಾ' ಎಂಬ ಪ್ರಸಿದ್ಧ ಆಲ್ಬಂಗೆ ಜೊತೆಗೂಡಿ ಕೆಲಸ ಮಾಡಿದ್ದು ಸುದ್ದಿಯಾಯಿತು. 16ರ ಹರೆಯದಲ್ಲಿ ಏಂಜೆಲ್/ಇಎಂಐ ಕಂಪನಿ ಜೊತೆಗೆ ವಿಶೇಷ ರೆಕಾರ್ಡಿಂಗ್ ಒಪ್ಪಂದವೂ ನಡೆಯಿತು. 1998ರಲ್ಲಿ ಬಂದ ಮೊದಲ ಆಲ್ಬಂ 'ಅನೂಷ್ಕಾ' ಸಾಕಷ್ಟು ಹೆಸರು ತಂದಿತು. 2000ದಲ್ಲಿ ಎರಡನೇ ಆಲ್ಬಂ 'ಅನೂರಾಗ್' ಖ್ಯಾತಿಯನ್ನು ಇನ್ನಷ್ಟು ಹರಡಿತು.

ಮೂರು ಆಲ್ಬಂಗಳನ್ನು ಹರೆಯದಲ್ಲೇ ಹೊರತಂದ ಅನೂಷ್ಕಾ ತಂದೆಯ ಪ್ರಭಾವಳಿಯಿಂದ ದೂರವಾಗಿ ಏಕಾಂಗಿ ಕಛೇರಿಯತ್ತ ಗಮನ ನೀಡಿದ್ದು ಸಹಜವಾಗಿಯೇ ಆಕೆಯ ಜನಪ್ರಿಯತೆಯನ್ನು ಹೆಚ್ಚಿಸಿತು. ವರ್ಷಕ್ಕೆ 50– 60 ಕಾರ್ಯಕ್ರಮಗಳನ್ನು ನೀಡುತ್ತಾ ಹಲವು ವಿಶ್ವಪರ್ಯಟನೆಗಳು ನಡೆದವು. 2010ರಲ್ಲಿ ಜೋ ರೈಟ್ ಜೊತೆಗೆ ಮದುವೆ ನಡೆದದ್ದು. ಏನು ಕಾರಣವೋ ಗೊತ್ತಿಲ್ಲ, ಒಂಭತ್ತು ವರ್ಷದ ಸಂಸಾರದ ಬಳಿಕ ಇಬ್ಬರೂ ದೂರವಾಗಿದ್ದಾರೆ.

ಅನೂಷ್ಕಾ ಚಿತ್ರನಟಿಯೂ ಹೌದು. 2004ರಲ್ಲಿ 'ಡಾನ್ಸ್ ಲೈಕ್ ಎ ಮ್ಯಾನ್'ನಲ್ಲಿ ನಟಿಸಿದ್ದರು. ಅದಕ್ಕೂ ಎರಡು ವರ್ಷ ಮುನ್ನ ಅವರು ಬರೆದ ತಂದೆಯ ಆತ್ಮಕಥನ 'ಬಾಪಿ: ದಿ ಲವ್ ಆಫ್ ಮೈ ಲೈಫ್' ಓದುಗರು ಮತ್ತು ವಿಮರ್ಶಕರ ಮೆಚ್ಚುಗೆ ಪಡೆದಿತ್ತು. 'ಹಿಂದೂಸ್ತಾನ್ ಟೈಮ್ಸ್'ನಲ್ಲಿ ಅವರ ವಾರದ ಕಾಲಂ ಕೂಡಾ ಜನಪ್ರಿಯವಾಗಿತ್ತು. ಸಂಸಾರದಲ್ಲಿ ಏರುಪೇರು ಈಕೆಯನ್ನು ಸ್ವಲ್ಪಕಾಲ ಸುದ್ದಿಯಿಂದ ಮರೆಮಾಡಿದ್ದು ಸುಳ್ಳಲ್ಲ. ಈಗ ಮತ್ತೆ ವೇದಿಕೆಯೇರಲು ಸಿದ್ಧವಾಗಿರುವುದು ಅಭಿಮಾನಿಗಳಿಗಂತೂ ಖುಷಿಯ ವಿಷಯವೇ. ■

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.
Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65